# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – 1474
ಉತ್ತರಿಸಬೇಕಾದ ದಿನಾಂಕ – 28.02.2018
ಸದಸ್ಯರ ಹೆಸರು – ಶ್ರೀ ಘೋಟ್ನೆಕರ ಶ್ರೀಕಾಂತ್ ಲಕ್ಷ್ಮಣ

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2013–14ನೇ ಸಾಲಿನಿಂದ 2017–18ನೇ ಸಾಲಿನವರೆಗೆ ಕಾರವಾರ ಜಿಲ್ಲೆಯಲ್ಲಿ ಯಾವ ಯಾವ ಯೋಜನೆಯಡಿಯಲ್ಲಿ ವಸತಿ ಇಲಾಖೆಯಿಂದ ಮನೆಗಳು ಮಂಜೂರು ಆಗಿರುತ್ತದೆ. (ಜಿಲ್ಲಾವಾರು ತಾಲ್ಲೂಕುವಾರು ವಿವರ ನೀಡುವುದು)</td><td>

**ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ವತಿಯಿಂದ:**

2013–14ನೇ ಸಾಲಿನಿಂದ 2017–18ನೇ ಸಾಲಿನವರೆಗೆ ಕಾರವಾರ ಜಿಲ್ಲೆಯಲ್ಲಿ ಒಟ್ಟು 29637 ಮನೆಗಳನ್ನು ಮಂಜೂರು ಮಾಡಲಾಗಿದೆ.

ಜಿಲ್ಲಾವಾರು ತಾಲ್ಲೂಕುವಾರು ವಿವರ ಅನುಬಂಧವನ್ನು ಸಿ.ಡಿ.ಯಲ್ಲಿ ಒದಗಿಸಲಾಗಿದೆ.

**ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ:**

2013–14 ನೇ ಸಾಲಿನಿಂದ 2017–18ನೇ ಸಾಲಿನವರೆಗೆ ಕಾರವಾರ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಆವಾಸ್ ಯೋಜನೆ–ಸರ್ವರಿಗೂ ಸೂರು ಯೋಜನೆಯಡಿ ಕೊಳಚೆ ನಿವಾಸಿಗಳಿಗೆ ಮನೆಗಳು ಮಂಜೂರಾಗಿರುತ್ತದೆ. ಜಿಲ್ಲೆ/ ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

<table>
<tr><th>ಕ್ರ ಸಂ.</th><th>ಜಿಲ್ಲೆ/ ತಾಲ್ಲುಕು ಹೆಸರು</th><th>ಮನೆಗಳ ಸಂಖ್ಯೆ</th><th>ಅಂದಾಜು ಮೊತ್ತ (ರೂ.ಲಕ್ಷ)</th></tr>
<tr><td>1</td><td>ಮುಂಡಗೋಡ್</td><td>209</td><td>1176.67</td></tr>
<tr><td>2</td><td>ದಾಂಡೇಲಿ</td><td>287</td><td>1615.81</td></tr>
<tr><td>3</td><td>ಹಳಿಯಾಳ್</td><td>213</td><td>1199.19</td></tr>
<tr><td></td><td>ಒಟ್ಟು</td><td>709</td><td>3991.67</td></tr>
</table>

</td></tr>
<tr><td>ಆ)</td><td>ಮಂಜೂರು ನೀಡಿರುವ ಮನೆಗಳ ಹಂಚಿಕೆ ಮಾಡುವಲ್ಲಿ ಅನುಸರಿಸಬೇಕಾದ ಮಾನದಂಡವೇನು: (ವಿವರ ನೀಡುವುದು)</td><td>

**ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ವತಿಯಿಂದ:**

ವಿವಿಧ ವಸತಿ ಯೋಜನೆಗಳಡಿಯಲ್ಲಿ ಮನೆಗಳನ್ನು ಮಂಜೂರು ಮಾಡಲು ಅರ್ಜಿದಾರರು ಈ ಕೆಳಕಂಡ ಎಲ್ಲಾ ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರಬೇಕಾಗಿರುತ್ತದೆ.

- ಅರ್ಜಿದಾರರು ಕಡ್ಡಾಯವಾಗಿ ಮಹಿಳೆಯಾಗಿರಬೇಕು(ವಿವಾಹಿತ ಅಥವಾ ಏಕ ಮಹಿಳಾ ಒಡೆತನದ ಗೃಹಿಣಿ). ಮಾಜಿ ಯೋಧರು, ವಿಧುರರು, ಅಂಗವಿಕಲರು ಮತ್ತು ಹಿರಿಯ ನಾಗರೀಕರಾಗಿದ್ದಲ್ಲಿ ಪುರುಷರು ಸಹಾ ಅರ್ಹರಾಗಿರುತ್ತಾರೆ.
- ಅರ್ಜಿದಾರರ ಕುಟುಂಬವು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಗ್ರಾಮೀಣ ಪ್ರದೇಶದವರಾಗಿದ್ದಲ್ಲಿರೂ. 32000/– ಕ್ಕಿಂತ ಕಡಿಮೆ ಇರಬೇಕು ಹಾಗೂ ನಗರ ಪ್ರದೇಶದವರಾಗಿದ್ದಲ್ಲಿ ರೂ.87,600/–ಕ್ಕಿಂತ ಕಡಿಮೆ ಇರಬೇಕು.
- ಅರ್ಜಿದಾರರ ಕುಟುಂಬವು ವಸತಿ ರಹಿತರಾಗಿದ್ದು, ಅರ್ಜಿದಾರರು ಅಥವಾ ಕುಟುಂಬದ ಯಾವುದೇ ಸದಸ್ಯರ ಹೆಸರಿನಲ್ಲಿ ಕರ್ನಾಟಕದ ಯಾವುದೇ ಭಾಗದಲ್ಲಿ ಸ್ವಂತ ಮನೆಯನ್ನು ಹೊಂದಿರಬಾರದು. ಶಿಥಿಲಗೊಂಡ ಮನೆ ಅಥವಾ ಗುಡಿಸಲಿನಲ್ಲಿ ವಾಸಿಸುತ್ತಿರುವವರು ಅರ್ಹರಾಗಿರುತ್ತಾರೆ.
- ಅರ್ಜಿದಾರರು ಸ್ವಂತ ನಿವೇಶನ ಹೊಂದಿದ್ದು ನಿವೇಶನಕ್ಕೆ ಸಂಬಂಧಿಸಿದಂತೆ ಖಾತೆ ಹೊಂದಿರಬೇಕು (ಪಾರಂಪರಿಕ ಅರಣ್ಯ ಹಕ್ಕುಗಳ ಕಾಯ್ದೆಯನ್ವಯ ಜಿಲ್ಲಾ ಸಮಿತಿಯಿಂದ ನೀಡಲಾದ ಹಕ್ಕುಪತ್ರ ಪಡೆದಿದ್ದಲ್ಲಿ ವಸತಿ ಸೌಕರ್ಯ ಪಡೆಯಲು ಪರಿಗಣಿಸಬಹುದಾಗಿದೆ.)
- ಬೇರೆ ಯಾವುದೇ ಯೋಜನೆ/ ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.

</td></tr>
</table>

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| | | **ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ:**<br>ಪ್ರಧಾನಮಂತ್ರಿ ಆವಾಸ್ ಯೋಜನೆಯ ಮಾರ್ಗಸೂಚಿಯಂತೆ ಕೊಳಚೆ ಪ್ರದೇಶಗಳಲ್ಲಿ ಬೇಡಿಕೆ ಸಮೀಕ್ಷೆ ಮಾಡಿ, ಬೇಡಿಕೆ ಸಮೀಕ್ಷೆ ಆಧಾರದ ಮೇಲೆ ಕಚ್ಚಾ ಮನೆ/ಅರೆ ಕಚ್ಚಾ ಮನೆಗಳಲ್ಲಿ ವಾಸಿಸುವ ಕೊಳಚೆ ನಿವಾಸಿಗಳನ್ನು ಆಯ್ಕೆ ಮಾಡಿ ಮನೆ ಹಂಚಿಕೆ ಮಾಡಲಾಗುವುದು. |
| ಇ) | ಸದರಿ ಯೋಜನೆಯಡಿಯಲ್ಲಿ ಕೆಲವೊಂದು ಕಡೆ ಮನೆ ಇದ್ದವರಿಗೆ ಮತ್ತೆ ಬೇರೆ ಬೇರೆ ಹೆಸರಿನಲ್ಲಿ ಮನೆ ಮಂಜೂರಿ ನೀಡಿದ್ದು ಈ ಬಗ್ಗೆ ಸರ್ಕಾರ ಕೂಲಂಕಷವಾಗಿ ತನಿಖೆ ನಡೆಸುವುದೇ; (ವಿವರ ನೀಡುವುದು) | **ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ವತಿಯಿಂದ:**<br>ವಸತಿ ಯೋಜನೆಗಳಡಿ ನಕಲಿ ಫಲಾನುಭವಿಗಳನ್ನು ತಡೆಹಿಡಿಯಲು GEO-Duplicate ತಂತ್ರಾಂಶವನ್ನು ಅಳವಡಿಸಿಕೊಂಡಿದೆ ಹಾಗೂ ವಸತಿ ಯೋಜನೆಯಡಿ ಆಯ್ಕೆಯಾಗಿರುವ ಎಲ್ಲಾ ಫಲಾನುಭವಿಗಳ ಆಧಾರ್ ಸಂಖ್ಯೆಯನ್ನು ಅಳವಡಿಸಲು ಕ್ರಮ ವಹಿಸಲಾಗಿದೆ. ನಕಲಿ ಫಲಾನುಭವಿಗಳನ್ನು ಆಯ್ಕೆಯಾಗಿದ್ದು ಕಂಡು ಬಂದಲ್ಲಿ ಅಂತಹ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.<br><br>**ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ:**<br>ಬೇಡಿಕೆ ಸಮೀಕ್ಷೆ ಆಧಾರದ ಮೇಲೆ ಕಚ್ಚಾ ಮನೆ/ ಅರೆ ಕಚ್ಚಾ ಮನೆಗಳಲ್ಲಿ ವಾಸಿಸುವ ಕೊಳಚೆ ನಿವಾಸಿಗಳನ್ನು ಆಯ್ಕೆ ಮಾಡಿ ಮನೆ ಹಂಚಿಕೆ ಮಾಡಲಾಗುವುದು. |
| ಈ) | ಜಿಲ್ಲೆಯಲ್ಲಿ 2013–14ನೇ ಸಾಲಿನಿಂದ 2017–18ನೇ ಸಾಲಿನವರೆಗೆ ವಿವಿಧ ಯೋಜನೆಯಡಿ ಮಂಜೂರಿ ಮಾಡಿರುವ ಮನೆ ಹಂಚಿಕೆ ಮಾಡಿದ ವಿವರ ನೀಡುವುದು?(ಜಿಲ್ಲಾವಾರು/ ತಾಲ್ಲೂಕುವಾರು ಹೆಸರು, ವಿಳಾಸದೊಂದಿಗೆ ಮಾಹಿತಿ ನೀಡುವುದು) | **ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ವತಿಯಿಂದ:**<br>ಕಾರವಾರ ಜಿಲ್ಲೆಯಲ್ಲಿ 2013–14ನೇ ಸಾಲಿನಿಂದ 2017–18ನೇ ಸಾಲಿನವರೆಗೆ ವಿವಿಧ ಯೋಜನೆಯಡಿ ಮಂಜೂರು ಮಾಡಲಾಗಿರುವ ಮನೆಗಳ ಜಿಲ್ಲಾವಾರು/ತಾಲ್ಲೂಕುವಾರು ಹೆಸರು, ವಿಳಾಸದ ಮಾಹಿತಿಯು ಸಿ.ಡಿ. ಯಲ್ಲಿ ನೀಡಲಾಗಿದೆ.<br><br>**ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ:**<br>2013–14 ನೇ ಸಾಲಿನಿಂದ 2017–18ನೇ ಸಾಲಿನವರೆಗೆ ಕಾರವಾರ ಜಿಲ್ಲೆಯಲ್ಲಿ ಮಂಡಳಿವತಿಯಿಂದ ಪ್ರಧಾನಮಂತ್ರಿ ಆವಾಸ್ ಯೋಜನೆ–ಸರ್ವರಿಗೂ ಸೂರು ಯೋಜನೆಯಡಿ ಕೊಳಚೆ ನಿವಾಸಿಗಳಿಗೆ ಮನೆಗಳು ಮಂಜೂರಾಗಿರುತ್ತದೆ. ಜಿಲ್ಲೆ/ ತಾಲ್ಲೂಕುವಾರು ವಿವರ ಕೆಳಕಂಡಂತಿದೆ. |

| ಕ್ರ ಸಂ. | ಜಿಲ್ಲೆ/ ತಾಲ್ಲೂಕು ಹೆಸರು | ಮನೆಗಳ ಸಂಖ್ಯೆ | ಷರಾ |
|---|---|---|---|
| 1 | ಮುಂಡಗೋಡ್ | 209 | ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿವೆ. |
| 2 | ದಾಂಡೇಲಿ | 287 | |
| 3 | ಹಳಿಯಾಳ್ | 213 | |
| | **ಒಟ್ಟು** | **709** | |

ಸಂಖ್ಯೆ: ವಇ 81 ಹೆಚ್‌ಎಎಂ 2018

(ಯು.ಟಿ.ಅಬ್ದುಲ್ ಖಾದರ್)
ವಸತಿ ಸಚಿವರು.